# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1235
ಮಾನ್ಯ ಸದಸ್ಯರ ಹೆಸರು : ಶ್ರೀ ಶಶೀಲ್ ಜಿ.ನಮೋಶಿ
ಉತ್ತರಿಸುವ ದಿನಾಂಕ : 13-03-2026
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

<table>
<tr><th>ಕ್ರ.<br>ಸಂ.</th><th>ವಿಷಯ</th><th>ಉತ್ತರ</th></tr>
<tr><td>ಅ)</td><td>ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ 56% ಮೀಸಲಾತಿಗೆ ಸಂಬಂಧಿಸಿದಂತೆ ಒಟ್ಟು ಎಷ್ಟು ಪ್ರಕರಣಗಳು ದಾಖಲಾಗಿವೆ; ಈ ಪ್ರಕರಣಗಳು ಯಾವ ಹಂತದಲ್ಲಿವೆ; (ಎಲ್ಲಾ ಪ್ರಕರಣಗಳ ವಿವರ ನೀಡುವುದು);</td><td>ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ 2022ರನ್ನು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಶೇ.17 & ಶೇ.7ಕ್ಕೆ ಪರಿಷ್ಕರಿಸಿ ಹೊರಡಿಸಲಾದ ಅಧಿನಿಯಮ ಮತ್ತು ಇತರ ಸರ್ಕಾರಿ ಆದೇಶಗಳನ್ನು ಪ್ರಶ್ನಿಸಿ ಈ ಕೆಳಕಂಡಂತೆ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಲಾಗಿದೆ.
<table>
<tr><th>ಕ್ರ<br>ಸಂ</th><th>ಪ್ರಕರಣ<br>ಸಂಖ್ಯೆ</th><th>ವಾದಿಗಳ ವಿವರ</th><th>ಪ್ರತಿವಾದಿಗಳ ವಿವರ</th></tr>
<tr><td>1</td><td>WP 200448<br>/2025</td><td>ಮಹೇಂದ್ರ<br>ಕುಮಾರ್ ಮಿತ್ರ</td><td>1.ಕಾರ್ಯದರ್ಶಿಗಳು, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ, ಭಾರತ ಸರ್ಕಾರ.<br>2.ಕಾರ್ಯದರ್ಶಿಗಳು, ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗ, ನವದೆಹಲಿ.<br>3.ಪ್ರಧಾನ ಕಾರ್ಯದರ್ಶಿಗಳು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.<br>4.ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ.</td></tr>
<tr><td>2</td><td>WP<br>3145/2023</td><td>ಮಹೇಶ್</td><td>ಸರ್ಕಾರದ<br>ಕಾರ್ಯದರ್ಶಿಗಳು,</td></tr>
</table>
</td></tr>
</table>

| ಕ್ರ.ಸಂ. | ವಿಷಯ | ಉತ್ತರ |
|---|---|---|

| | | | |
|---|---|---|---|
| | | | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ |
| 3 | WP 17968/2025 | ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ & ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ | 1.ಮಧು ಬಿ.ಎನ್, ಚನ್ನಪಟ್ಟಣ, ರಾಮನಗರ<br>2. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ. |
| 4 | WP 25515/2025 | ಸಾಗರ್ ಹೆಚ್.ಆರ್ & ಇತರರು | 1.ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.<br>2.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿ.ಆ.ಸು.ಇ<br>3.ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.<br>4. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ.<br>5.ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. |

ಮೇಲಿನ ಪ್ರಕರಣಗಳನ್ನು ಒಟ್ಟುಗೂಡಿಸಿ **ರಿಟ್ ಅರ್ಜಿ:200448/2025ರಲ್ಲಿ** ವಿಚಾರಣೆ ನಡೆಸಿದ, ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ:**19-11-2025 & 27-11-2025ರ** ಮಧ್ಯಂತರ ಆದೇಶಗಳಲ್ಲಿ ಮೀಸಲಾತಿ ಪರಿಷ್ಕರಣೆ ಆದೇಶದ ಅಧಿನಿಯಮ ಜಾರಿಗೆ ತಾತ್ಕಾಲಿಕ ತಡೆ ನೀಡಿ, ಈ ಕೆಳಕಂಡಂತೆ ಆದೇಶಿಸಲಾಗಿರುತ್ತದೆ.

"Considering that recruitment process has already begun pursuant to certain notifications specifying the enhanced reservation under the Karnataka Scheduled castes and Scheduled Tribes (Reservation of Seats in Education Institutions and Appointments of Posts and Services under the State) Act,

| ಕ್ರ. ಸಂ. | ವಿಷಯ | ಉತ್ತರ |
|---|---|---|
| | | 2022 (hereafter Act), we consider it apposite to modify our order dated 19-11-2025 to direct that no further notifications for recruitment or appointment on the basis of increased reservation would be issued till the disposal of the present petitions. The recruitment pursuant to the process that is already begun may be continued. However, any appointment made shall be subject to the final outcome of present petitions. |
| ಆ) | ರಾಜ್ಯದ ಲಕ್ಷಾಂತರ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 56% ಮೀಸಲಾತಿ ಪ್ರಕರಣವು ಇತ್ಯರ್ಥವಾಗುವವರೆಗೂ ಹಳೆಯ 50% ಮೀಸಲಾತಿ ಮತ್ತು ರೋಸ್ಟರ್ ಅನುಸಾರವಾಗಿಯೇ ನೇಮಕಾತಿಗಳನ್ನು ಮಾಡಿಕೊಳ್ಳಬಹುದಲ್ಲವೇ; ಈ ಕುರಿತು ಸರ್ಕಾರ ಯಾವ ನಿರ್ಧಾರ ಕೈಗೊಳ್ಳಲಿದೆ; ಈ ಕುರಿತು ಸ್ಪಷ್ಟನೆ ನೀಡುವುದು; | ಸರ್ಕಾರದ ಆದೇಶ ಸಂ:ಸಿಆಸುಇ 01 ಸೆಹಿಮ 2026, ದಿನಾಂಕ: 27-02-2026ರಲ್ಲಿ 2022ರ ಅಧಿನಿಯಮದನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹೆಚ್ಚಿಸಲಾದ ಮೀಸಲಾತಿ ಪ್ರಮಾಣವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದ ಹಿನ್ನಲೆಯಲ್ಲಿ ಹಾಗೂ ನಿರುದ್ಯೋಗಿ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಹಾಗೂ ಆಡಳಿತಾತ್ಮಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಿರುವ ಹಿನ್ನಲೆಯಲ್ಲಿ ಸರ್ಕಾರದ ಆದೇಶ ದಿನಾಂಕ:28-12-2022ರ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಆದೇಶ ಮತ್ತು ರೋಸ್ಟರ್ ಬಿಂದುಗಳಂತೆ (ಮೀಸಲಾತಿ ಪ್ರಮಾಣ ಶೇ.50ಕ್ಕೆ) ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ನಿರ್ದೇಶನಗಳೊಂದಿಗೆ ಆದೇಶ ಹೊರಡಿಸಲಾಗಿರುತ್ತದೆ. |
| ಇ) | ಮುಂದಿನ ದಿನಗಳಲ್ಲಿ ಈ ಮೀಸಲಾತಿ ಪ್ರಕರಣವನ್ನು ಬೇಗ ಇತ್ಯರ್ಥ ಪಡಿಸಿಕೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ (ವಿವರ ನೀಡುವುದು) | ಮೇಲೆ ವಿವರಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶವನ್ನು ಮಾರ್ಪಡಿಸುವಂತೆ ಕೋರಿ ದಿನಾಂಕ:11.12.2025ರಂದು ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರಿಂದ ಮಧ್ಯಂತರ ಅರ್ಜಿಯನ್ನು ಈ ಕೆಳಕಂಡಂತೆ ಮಾನ್ಯ ನ್ಯಾಯಾಲಯಕ್ಕೆ ದಾಖಲಿಸಲಾಗಿರುತ್ತದೆ.<br><br>"Hon'ble court may be pleased to pass an order permitting the state government to go ahead with fresh recruitments in terms of the Karnataka Scheduled castes and Scheduled Tribes (Reservation of Seats in Education Institutions and Appointments of Posts and Services under the State) Act, 2022 subject to the result of this writ petition, in the interest of justice and equity"<br><br>ಸದರಿ ಪ್ರಕರಣದ ಮುಂದಿನ ವಿಚಾರಣೆಯನ್ನು ಮಾನ್ಯ ನ್ಯಾಯಾಲಯವು **ದಿನಾಂಕ:01-04-2026** ಕ್ಕೆ ನಿಗಧಿಪಡಿಸಲಾಗಿದ್ದು, ವಿಚಾರಣಾ ಹಂತದಲ್ಲಿರುತ್ತದೆ. |

| | | |
|---|---|---|
| ಈ) | 384 ಕೆಎಎಸ್ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿಯಲ್ಲಿ ರೋಸ್ಟರ್ / ಮೀಸಲಾತಿ ಅನ್ವಯವಾಗಲಿದ್ದು, 56% ಗೆ ಸಂಬಂಧಿಸಿದ ಮಧು ಬಿ.ಎಸ್ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯವು ಅಂತಿಮವಾಗಿ ಶೇ.50 ಗೆ ನಿಗಧಿಪಡಿಸಲು ಆದೇಶಿಸಿದರೆ ಈ ನೇಮಕಾತಿಯಲ್ಲಿ ಯಾವ ರೀತಿಯ ಮಾರ್ಪಾಡುಗಳನ್ನು ಮಾಡಲಾಗುತ್ತದೆ. | ಪ್ರಸ್ತುತ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದ್ದು, ಸದರಿ ವಿಷಯವು ವಿಚಾರಣಾಧೀನ (Sub Judice) ವಾಗಿರುತ್ತದೆ. ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಪನ್ನು ಪರಿಶೀಲಿಸಿ ಮುಂದಿನ ಅಗತ್ಯ ಕ್ರಮ ವಹಿಸಲಾಗುವುದು. |

**ಸಕಇ 251 ಪಕವಿ 2026**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**